ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ದಿನಾಂಕ: 31–01–2014ರ ನಡವಳಿಗಳು

ವಿಷಯದ ಸಂಖ್ಯೆ: ವಾಕಾಸ್ಥಾಸ/ 194/2013–14

ಪ್ರಸ್ತಾವನೆ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 198 ವಾರ್ಡ್‌ಗಳ ಚುನಾಯಿತ ಸದಸ್ಯರ ಪೈಕಿ ಹಲವಾರು ಪಾಲಿಕೆ ಸದಸ್ಯರುಗಳು ವಾರ್ಡ್‌ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ ಪತ್ರ ಬರೆದು ತಮ್ಮ ತಮ್ಮ ವಾರ್ಡ್‌ಗಳ ವ್ಯಾಪ್ತಿಯಲ್ಲಿ ಜರೂರಾಗಿ ಕೆಲವು ಕಾಮಗಾರಿಗಳನ್ನು ಕೈಗೊಳ್ಳಲು ಅನುದಾನದ ಕೊರತೆ ಇರುವುದರಿಂದ ಅನುದಾನ ಒದಗಿಸಿಕೊಟ್ಟು ಕಾಮಗಾರಿಯನ್ನು ಕೆ.ಆರ್.ಡಿ.ಐ.ಎಲ್ ಮುಖಾಂತರ ಕೈಗೆತ್ತಿಕೊಂಡು ಪೂರ್ಣಗೊಳಿಸಲು ಪತ್ರದ ಮೂಲಕ ಕೋರಿರುವರು.

1. ಪಾಲಿಕೆ ಸದಸ್ಯರು ಪತ್ರದ ಮೂಲಕ ಕೋರಿರುವ ಕಾಮಗಾರಿಗಳಿಗೆ ಸ್ಥಾಯಿ ಸಮಿತಿಯು ಮೊದಲ ಆದ್ಯತೆ ನೀಡಿದ್ದು, ಪತ್ರದಲ್ಲಿ ಪ್ರಮುಖವಾಗಿ ವಾರ್ಡ್ ವ್ಯಾಪ್ತಿಯಲ್ಲಿ ಸಾರ್ವಜನಿಕರ ಅನುಕೂಲಕ್ಕಾಗಿ ವಾರ್ಡ್ ಕಚೇರಿ ನಿರ್ಮಾಣ, ಬೀದಿ ದೀಪಗಳನ್ನು ಅಳವಡಿಕೆ, ಸ್ಮಶಾನಗಳಿಗೆ ನೀರಿನ ವ್ಯವಸ್ಥೆ, ಉದ್ಯಾನವನದ ಅಭಿವೃದ್ಧಿ, ಆಟದ ಮೈದಾನ ಅಭಿವೃದ್ಧಿ, ಆಟದ ಮೈದಾನಕ್ಕೆ ದೀಪದ ವ್ಯವಸ್ಥೆ, ಚರಂಡಿ ಮತ್ತು ಪಾದಚಾರಿ ರಸ್ತೆ ಅಭಿವೃದ್ಧಿ ಇತ್ಯಾಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಕೋರಿರುವರು.

   ಮುಂದುವರೆದು ನಗರದ ಮಧ್ಯಭಾಗದಲ್ಲಿರುವ ಗಾಂಧಿನಗರ ಪ್ರದೇಶದಲ್ಲಿ ಪಾಲಿಕೆಯು ಗುಬ್ಬಿವೀರಣ್ಣ ರಂಗ ಮಂದಿರವನ್ನು ನಿರ್ಮಿಸಿದ್ದು, ಸದರಿ ರಂಗಮಂದಿರದ ನಿರ್ವಹಣೆ ಸರಿ ಇಲ್ಲವೆಂದು ಪರಿಗಣಿಸಿ, ಸದರಿ ಜಾಗವನ್ನು ವಿಲೇವಾರಿ ಮಾಡುತ್ತಿರುವುದಾಗಿ ಮಾಧ್ಯಮಗಳಲ್ಲಿ ಸುದ್ದಿಯು ಬಿತ್ತರಗೊಂಡಿದ್ದು, ಈ ಬಗ್ಗೆ ಸಂಬಂಧಪಟ್ಟ ಅಭಿಯಂತರರುಗಳೊಂದಿಗೆ ಚರ್ಚಿಸಲಾಯಿತು ಹಾಗೂ ರಂಗಮಂದಿರವನ್ನು ಯಾವುದೇ ಕಾರಣಕ್ಕೂ ಮಾರಾಟ ಮಾಡದೇ ಪಾಲಿಕೆಯ ವತಿಯಿಂದಲೇ ನಿರ್ವಹಣೆ ಮಾಡುವಂತೆ ಕ್ರಮಕೈಗೊಳ್ಳಬೇಕೆಂದು ಮಾನ್ಯ ಆಯುಕ್ತರಿಗೂ ಸಹ ಪತ್ರ ಬರೆದು ಕೋರಲಾಗಿದೆ, ಕಾರ್ಯಪಾಲಕ ಅಭಿಯಂತರರು(ಗಾಂಧಿನಗರ)ರೊಡನೆ ಚರ್ಚಿಸಿದ ಸಮಯದಲ್ಲಿ ಗುಬ್ಬಿ ವೀರಣ್ಣ ರಂಗಮಂದಿರವನ್ನು ದುರಸ್ತಿಪಡಿಸಲು, ಸುಮಾರು 50–00ಲಕ್ಷರೂಗಳ ಅನುದಾನ ಅವಶ್ಯಕತೆ ಇರುವುದಾಗಿ ತಿಳಿಸಿರುತ್ತಾರೆ.

2. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಿಗೆ ಮತ್ತು ವಿದ್ಯುತ್ ಚಿತಾಗಾರಗಳಲ್ಲಿ ಬಿಸಿನೀರಿನ ಅವಶ್ಯಕತೆ ಇದೆ ಎಂದು ಮಾಹಿತಿ ಬಂದ ಹಿನ್ನೆಲೆಯಲ್ಲಿ ಅಧಿಕಾರಿಗಳೊಂದಿಗೆ ಈ ಬಗ್ಗೆ ಚರ್ಚಿಸಲಾಯಿತು. ಸದರಿ ಚರ್ಚೆಯ ಸಮಯದಲ್ಲಿ ವಿದ್ಯುತ್ ಚಿತಾಗಾರಗಳಿಗೆ ಬಿಸಿನೀರಿನ ವ್ಯವಸ್ಥೆ ಅವಶ್ಯಕವೆಂದು ಅಭಿಪ್ರಾಯ ವ್ಯಕ್ತವಾದ ಹಿನ್ನೆಲೆಯಲ್ಲಿ ಪ್ರತಿ ಆಸ್ಪತ್ರೆಗೆ ಮತ್ತು ವಿದ್ಯುತ್ ಚಿತಾಗಾರಕ್ಕೆ ಒಂದು ಲಕ್ಷ ಅಂದಾಜಿಸಿ ಸೋಲಾರ್ ವಾಟರ್ ಹೀಟರ್ ಅಳವಡಿಸುವುದು ಸೂಕ್ತವೆಂದು ಕಂಡುಬಂದಿತು.

3. ಮಿಷನ್‌ರಸ್ತೆ ಮತ್ತು ಮಾಗಡಿ ರಸ್ತೆಯಲ್ಲಿರುವ ಪಾಲಿಕೆಯ ವಸತಿ ಗೃಹಗಳ ನಿವಾಸಿಗಳು ಮನವಿ ಸಲ್ಲಿಸಿ, ದಿನೇ ದಿನೇ ವಿದ್ಯುತ್ ಸಮಸ್ಯೆ ಹೆಚ್ಚಾಗುತ್ತಿರುವುದಾಗಿ ಹಾಗೂ ವಿದ್ಯುತ್ ಅಭಾವ ಇರುವ ಈ ಸಮಯದಲ್ಲಿ ಉಳಿತಾಯ ಮಾಡುವ ದೃಷ್ಟಿಯಿಂದ ಈ ಎರಡು ಕಡೆಗಳಲ್ಲಿರುವ ಪಾಲಿಕೆಯ ವಸತಿ ಗೃಹಗಳಿಗೆ ಸೋಲಾರ್ ವಾಟರ್ ಹೀಟರ್ ಅನ್ನು ಅಳವಡಿಸುವಂತೆ ಕೋರಿರುವುದನ್ನು ಸಹ ಪರಿಗಣಿಸಿ, ಪಾಲಿಕೆಯ ವಸತಿಗೃಹಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಿದಲ್ಲಿ ಇದು ಪಾಲಿಕೆಯ ಕಟ್ಟಡದಲ್ಲಿಯೇ ಶಾಶ್ವತವಾಗಿ ಉಳಿಯುವುದರ ಜೊತೆಗೆ ನೌಕರರಿಗೂ ಸಹ

ಅನುಕೂಲವಾಗುವುದಲ್ಲದೆ, ವಿದ್ಯುತ್ ಅಭಾವ ಇರುವ ಇಂತಹ ಸಂದರ್ಭದಲ್ಲಿ ವಿದ್ಯುತ್ ಉಳಿತಾಯಕ್ಕೂ ಸಹ ಉತ್ತೇಜನ ನೀಡಿದಂತಾಗುವುದರಿಂದ ನೌಕರರ ಮನವಿಯನ್ನು ಸಹ ಸಮಿತಿಯು ಪರಿಗಣಿಸಿದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಆದ್ಯತೆ ಮೇಲೆ ಪರಿಗಣಿಸಿದ್ದು, ಪಾಲಿಕೆ ಸದಸ್ಯರು ಕೋರಿರುವ ಕಾಮಗಾರಿಗಳು ಜರೂರು ಕಾಮಗಾರಿಗಳಾಗಿದ್ದು, ಇದೇ ರೀರಿ ಗುಬ್ಬಿ ವೀರಣ್ಣ ರಂಗಮಂದಿರವು ಸಹ ಪ್ರಖ್ಯಾತ ರಂಗ ಕರ್ಮಿ ಗುಬ್ಬಿವೀರಣ್ಣರವರ ಹೆಸರಿನಲ್ಲಿ ನಿರ್ಮಿಸಿರುವುದರಿಂದ, ಇವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುವುದು ಪಾಲಿಕೆಯ ಜವಾಬ್ದಾರಿ ಹಾಗೂ ನಾಟಕ ರಂಗಕ್ಕೆ ಪ್ರೋತ್ಸಾಹ ನೀಡುವುದು ಸೂಕ್ತವಾಗಿರುವುದರಿಂದ ಇದನ್ನು ಸಹ ಪರಿಗಣಿಸಲಾಯಿತು ಹಾಗೂ ನೌಕರರ ಮನವಿಯನ್ನು ಪರಿಗಣಿಸಿ, ಮೊದಲ ಹಂತದಲ್ಲಿ 2 ಕಡೆಗಳಲ್ಲಿ ಸೋಲಾರ್ ವಾಟರ್ ಹೀಟರ್ ಅಳವಡಿಸುವುದು ಸೂಕ್ತವೆಂದು ಸಮಿತಿಯು ತೀರ್ಮಾನಿಸಿ ಈ ಕೆಳಕಂಡಂತೆ ನಿರ್ಣಯಿಸಿತು.

ನಿರ್ಣಯ:-

2013-14ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ ಪಿ-ಕೋಡ್ 1771ರಲ್ಲಿ ಮೀಸಲಿಟ್ಟಿರುವ ರೂ.494.00 ಕೋಟಿಗಳ ಅನುದಾನದ ಪೈಕಿ ಈಗಾಗಲೇ ಜಾಬ್ ಸಂಖ್ಯೆ ನೀಡಲಾಗಿರುವ 465.00ಕೋಟಿಗಳ ಅನುದಾನ ಹೊರತುಪಡಿಸಿ ಉಳಿಕೆಯಾಗಿರುವ ರೂ:29.00ಕೋಟಿಗಳ ಅನುದಾನದಲ್ಲಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಅಧ್ಯಕ್ಷರು ಸೂಚಿಸುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ವಿಷಯ: ಸಂಖ್ಯೆ:ವಾ.ಕಾ.ಸ್ಥಾ.ಸ/ವಿ/65/2012-13,ದಿನಾಂಕ:30-10-2013ರಂದು ನಿರ್ಣಯಿಸಲಾಗಿದ್ದು, ಅದರಂತೆ ಈ ಕೆಳಕಂಡ ಕಾಮಗಾರಿಗಳು ಅತಿ ಜರೂರು ಕಾಮಗಾರಿಗಳಾಗಿರುವುದರಿಂದ ಕ್ರಮಸಂಖ್ಯೆ: 01 ರಿಂದ 77 ವರೆಗಿನ ಕಾಮಗಾರಿಗಳ ಒಟ್ಟು ಮೊತ್ತ ರೂ: 1799.75ಲಕ್ಷ ಕಾಮಗಾರಿಗಳಿಗೆ ಜಾಬ್ ಸಂಖ್ಯೆ ನೀಡಿ, ಪ್ರಸ್ತಾಪಿತ ಕಾಮಗಾರಿಗಳು ಜರೂರು ಕಾಮಗಾರಿಗಳಾಗಿರುವುದರಿಂದ ಸರ್ಕಾರಿ ಸ್ವಾಮ್ಯದ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮುಖಾಂತರ ಕೈಗೆತ್ತಿಕೊಳ್ಳಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ವಾರ್ಡ್ ಮಟ್ಟದ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿಯ ಮುಂದೆ ಮಂಡಿಸುವಂತೆ ತೀರ್ಮಾನಿಸಲಾಯಿತು.

ಕ್ರ.ಸ	ಕಾಮಗಾರಿ ವಿವರ	ಕಾಮಗಾರಿ ಸಂಖ್ಯೆ ನೀಡಲು ಕೋರಿರುವ ಅಂದಾಜು ಮೊತ್ತ ರೂ:ಲಕ್ಷಗಳಲ್ಲಿ
1	ವಾರ್ಡ್ ಸಂಖ್ಯೆ:94 ಗಾಂಧಿನಗರ ಪ್ರದೇಶದಲ್ಲಿ ಬರುವ ಪ್ರಖ್ಯಾತ ರಂಗಕರ್ಮಿ ಗುಬ್ಬೀವೀರಣ್ಣ ರಂಗಮಂದಿರದ ದುರಸ್ತಿ ಕಾರ್ಯ ಕೈಗೊಳ್ಳಲು	50.00
2	ವಾರ್ಡ್ ಸಂಖ್ಯೆ:45ರ ಮಲ್ಲೇಶ್ವರಂನಲ್ಲಿ ವಾರ್ಡ್ ಕಚೇರಿ ನಿರ್ಮಿಸುವ ಕಾಮಗಾರಿ	50.00
3	ವಾರ್ಡ್ ಸಂಖ್ಯೆ:179ರ ಶಾಖಾಂಬರಿ ನಗರ ಪ್ರದೇಶದಲ್ಲಿ ವಾರ್ಡ್ ಕಚೇರಿಯ ಮೇಲೆ ಹೆಚ್ಚುವರಿ ಮೊದಲನೇ ಅಂತಸ್ತಿನ ಕಟ್ಟಡ ನಿರ್ಮಿಸುವ ಕಾಮಗಾರಿ	30.00
4	ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ವಾಚನಾಲಯ ಕಟ್ಟಡ ನಿರ್ಮಿಸುವ ಕಾಮಗಾರಿ	15.00
5	ವಾರ್ಡ್ ಸಂಖ್ಯೆ:125ರ ವಾರ್ಡ್ ಕಚೇರಿ ನಿರ್ಮಿಸಲು ಅನುದಾನ ಅವಶ್ಯಕತೆ ಇರುವುದರಿಂದ ಸದರಿ ವಾರ್ಡ್ ಕಚೇರಿ ನಿರ್ಮಾಣಕ್ಕೆ	50.00

6	ವಾರ್ಡ್ ಸಂಖ್ಯೆ:157ರಲ್ಲಿ ಅಂಗನವಾಡಿ ಮತ್ತು ವಿವಿದೊದ್ದೇಶ ಕಟ್ಟಡ ನಿರ್ಮಿಸುವ ಕಾಮಗಾರಿ	30.00
7	ವಾರ್ಡ್–38ರಲ್ಲಿ ಬರುವ ಶಾಲಾ ಕಟ್ಟಡ ದುರಸ್ತಿ ಹಾಗೂ ಅಭಿವೃದ್ದಿ	26.00
8	ಪೂರ್ವ ವಲಯದಲ್ಲಿ ಬರುವ ವಿದ್ಯುತ್ ಚಿತಾಗಾರಕ್ಕೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	1.00
9	ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಚಿತಾಗಾರಕ್ಕೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	2.00
10	ಆರ್.ಆರ್.ನಗರ ವಲಯದ್ದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಚಿತಾಗಾರಕ್ಕೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	3.00
11	ಯಲಹಂಕ ವಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಚಿತಾಗಾರಕ್ಕೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	2.00
12	ಬೊಮ್ಮನಹಳ್ಳಿ ವಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಚಿತಾಗಾರಕ್ಕೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	1.00
13	ಪೂರ್ವ ವಲಯದಲ್ಲಿ ಬರುವ 8 ಆಸ್ಪತ್ರೆಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	8.00
14	ದಕ್ಷಿಣ ವಲಯದ ವ್ಯಾಪ್ತಿಯಲ್ಲಿ ಬರುವ 12 ಆಸ್ಪತ್ರೆಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	12.00
15	ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಬರುವ 12 ಆಸ್ಪತ್ರೆಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	12.00
16	ಆರ್.ಆರ್.ನಗರ ವಲಯದ ವ್ಯಾಪ್ತಿಯಲ್ಲಿ ಬರುವ ಆಸ್ಪತ್ರೆಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	2.00
17	ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಬರುವ ಮಾಗಡಿ ರಸ್ತೆ 1ನೇ ಅಡ್ಡರಸ್ತೆಯಲ್ಲಿರುವ 20 ವಸತಿ ಗೃಹಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	15.00
18	ಪೂರ್ವ ವಲಯದ ಮಿಷನ್ ರಸ್ತೆಯಲ್ಲಿರುವ ಪಾಲಿಕೆಯ ಎ.ಬಿ.ಸಿ. ಬ್ಲಾಕ್ 20 ವಸತಿಗೃಹಗಳಿಗೆ ಸೋಲಾರ್ ವಾಟರ್ ಹೀಟರ್ ಅಳವಡಿಸಲು	15.00
19	ವಾರ್ಡ್ ಸಂಖ್ಯೆ:118ರಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಪ್ರದೇಶದಲ್ಲಿ ಕೊಳವೆ ಬಾವಿ ಕೊರೆದು ನೀರಿನ ಸಂಪರ್ಕ ಕಲ್ಪಿಸಲು	15.00
20	ವಾರ್ಡ್ ಸಂಖ್ಯೆ:164ರಲ್ಲಿ ಹೊಸದಾಗಿ ನಿರ್ಮಾಣವಾಗುತ್ತಿರುವ ಶ್ರೀ.ಕುಮಾರಸ್ವಾಮಿ ಉದ್ಯಾನವನ ಸಿವಿಲ್ ಕಾಮಗಾರಿ	100.00
21	ವಾರ್ಡ್ ಸಂಖ್ಯೆ:115ರಲ್ಲಿ ಬರುವ ನೀಲಸಂದ್ರ ಬಿ.ಡಿ.ಎ ಪ್ರದೇಶದಲ್ಲಿ ಬರುವ ಮೈದಾನ ಮತ್ತು ಉದ್ಯಾನವನ ಅಭಿವೃದ್ದಿಗಾಗಿ	50.00
22	ವಾರ್ಡ್ ಸಂಖ್ಯೆ:32 ಕಾವಲ್ ಬೈರಸಂದ್ರ ವಾರ್ಡ್‌ನ ವ್ಯಾಪ್ತಿಯಲ್ಲಿ ಬರುವ ಉದ್ಯಾನವನದ ಜಾಗವಿದ್ದು ಸದರಿ ಜಾಗವನ್ನು ರಕ್ಷಿಸುವ ದೃಷ್ಟಿಯಿಂದ ಸೇಫ್ಟಿ ಗ್ರಿಲ್ ಮತ್ತು ನಡೆದಾರಿ ನಿರ್ಮಾಣ ಮಾಡುವ ಕಾಮಗಾರಿ	50.00
23	ವಾರ್ಡ್ ಸಂಖ್ಯೆ:197ರಲ್ಲಿ ಬೀದಿ ದೀಪ ಅಳವಡಿಸಲು	49.90
24	ವಾರ್ಡ್ ಸಂಖ್ಯೆ:160ರ ರಾಜರಾಜೇಶ್ವರಿನಗರ ಪ್ರದೇಶದಲ್ಲಿ ಬೀದಿ ದೀಪಗಳನ್ನು	10.00

	ಅಳವಡಿಸಲು	
25	ವಾರ್ಡ್ ಸಂಖ್ಯೆ:128ರ ವ್ಯಾಪ್ತಿಯಲ್ಲಿ ಬೀದಿ ದೀಪ ಅಳವಡಿಸುವ ನಿರ್ಮಿಸುವ ಕಾಮಗಾರಿ	10.00
26	ವಾರ್ಡ್ ಸಂಖ್ಯೆ:178ರ ಸಾರಕ್ಕಿ ವಾರ್ಡ್ ಪ್ರದೇಶದ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	20.00
27	ವಾರ್ಡ್ ಸಂಖ್ಯೆ:47ರ ವ್ಯಾಪ್ತಿಯಲ್ಲಿ ಬರುವ ಇಂದಿರಾಪುರಂ ಹಾಗೂ ರೋಷನ್‌ನಗರ ಮತ್ತು ಈದ್ಗಾ ಕೊಳಚೆ ಪ್ರದೇಶಕ್ಕೆ ಸೋಲಾರ್ ಲೈಟ್ ಅಳವಡಿಸುವ ಕಾಮಗಾರಿ	15.00
28	ವಾರ್ಡ್ ಸಂಖ್ಯೆ:133ರ ಹಂಪಿನಗರ ಪ್ರದೇಶದಲ್ಲಿ ಬರುವ ಸ್ಮಶಾನಕ್ಕೆ ನೀರಿನ ವ್ಯವಸ್ಥೆ ಕಲ್ಪಿಸಲು	6.00
29	ವಾರ್ಡ್ ಸಂಖ್ಯೆ:172ವ್ಯಾಪ್ತಿಯಲ್ಲಿ ಹೊಸ ಬೀದಿ ದೀಪದ ಕಂಬ ಹಾಗೂ ಬೀದಿ ದೀಪ ಅಳವಡಿಸುವ ಕಾಮಗಾರಿ	20.00
30	ವಾರ್ಡ್ ಸಂಖ್ಯೆ:41ರ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	20.00
31	ವಾರ್ಡ್ ಸಂಖ್ಯೆ:06ರ ಧಣಿಸಂದ್ರ ವ್ಯಾಪ್ತಿಯಲ್ಲಿ ಬರುವ ಶಾಲೆಯ ಆಟದ ಮೈದಾನಗಳಲ್ಲಿ ಬೆಳಕಿನ ವ್ಯವಸ್ಥೆಯನ್ನು ಕಲ್ಪಿಸಲು	10.00
32	ವಾರ್ಡ್ ಸಂಖ್ಯೆ:40ರ ದೊಡ್ಡಬಿದರಕಲ್ಲು ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು	10.00
33	ವಾರ್ಡ್ ಸಂಖ್ಯೆ:63ರ ಜಯಮಹಲ್ ಪ್ರದೇಶದಲ್ಲಿ ಹೊಸ ಬೀದಿ ದೀಪದ ಕಂಬ ಹಾಗೂ ಬೀದಿ ದೀಪ ಸ್ಥಾಪಿಸುವ ಕಾಮಗಾರಿ	10.00
34	ವಾರ್ಡ್ ಸಂಖ್ಯೆ:137ರ ರಾಯಪುರಂ ಪ್ರದೇಶದಲ್ಲಿ ಕಂಟ್ರೋಲ್ ವೈರ್, ಕಂಟ್ರೋಲ್ ಸ್ವಿಚ್ ಮತ್ತು ಟೈಮರ್ ಅಳವಡಿಸುವ ಕಾಮಗಾರಿ	15.00
35	ವಾರ್ಡ್ ಸಂಖ್ಯೆ:185 ಯಲಚೇನಹಳ್ಳಿ ಪ್ರದೇಶದಲ್ಲಿ ಹೊಸ ಬೀದಿ ದೀಪ ಕಂಬ ಹಾಗೂ ಬೀದಿ ದೀಪ ಸ್ಥಾಪಿಸುವ ಕಾಮಗಾರಿ	10.00
36	ವಾರ್ಡ್ ಸಂಖ್ಯೆ:49ರ ಲಿಂಗರಾಜಪುರ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	5.00
37	ವಾರ್ಡ್ ಸಂಖ್ಯೆ:187ರ ವಾರ್ಡ್ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	20.00
38	ವಾರ್ಡ್ ಸಂಖ್ಯೆ:127ರ ಮೂಡಲಪಾಳ್ಯ ಪ್ರದೇಶದಲ್ಲಿ ಬರುವ ಉದ್ಯಾನವನಗಳಿಗೆ ಬೆಳಕಿನ ವ್ಯವಸ್ಥೆ ಕಲ್ಪಿಸುವ ಕಾಮಗಾರಿ	20.00
39	ವಾರ್ಡ್ ಸಂಖ್ಯೆ:136ರ ವ್ಯಾಪ್ತಿಯಲ್ಲಿ ಬರುವ ಸ್ಮಶಾನ ಮತ್ತು ಉದ್ಯಾನವನಗಳಿಗೆ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿ	15.00
40	ವಾರ್ಡ್ ಸಂಖ್ಯೆ:126ರ ವ್ಯಾಪ್ತಿಯಲ್ಲಿ ಕಿರಿದಾದ ರಸ್ತೆಗಳು ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿ	40.00
41	ವಾರ್ಡ್ ಸಂಖ್ಯೆ:20ರ ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿಗಳನ್ನು ಕೈಗೊಳ್ಳುವ ಕಾಮಗಾರಿ	10.00
42	ವಾರ್ಡ್ ಸಂಖ್ಯೆ:111ರ ವ್ಯಾಪ್ತಿಯಲ್ಲಿ ಬರುವ ಮಡ್ ಟ್ಯಾಂಕ್ ಮತ್ತು ನಂದಂ ಮೈದಾನಗಳ ಅಭಿವೃದ್ಧಿ ಕಾಮಗಾರಿಗೆ	50.00
43	ವಾರ್ಡ್ ಸಂಖ್ಯೆ:111ರ ವ್ಯಾಪ್ತಿಯಲ್ಲಿ ಬರುವ ಮಡ್ ಟ್ಯಾಂಕ್ ಮತ್ತು ನಂದಂ	50.00

	ಮೈದಾನಗಳಿಗೆ ವಿದ್ಯುತ್ ಕಾಮಗಾರಿ ಕೈಗೊಳ್ಳಲು	
44	ವಾರ್ಡ್–193ರ ವ್ಯಾಪ್ತಿಯಲ್ಲಿ ಸೋಡಿಯಂ ದೀಪಗಳನ್ನು ಅಳವಡಿಸುವ ಕಾಮಗಾರಿ	15.00
45	ವಾರ್ಡ್–188ರ ಬಿಳೇಕಳ್ಳಿ ಪ್ರದೇಶದ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	10.00
46	ವಾರ್ಡ್–120ರ ಕಾಟನ್ ಪೇಟೆ ವಾರ್ಡ್ ವ್ಯಾಪ್ತಿಯಲ್ಲಿ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿ	10.00
47	ವಾರ್ಡ್–19ರ ಸಂಜಯನಗರ ವ್ಯಾಪ್ತಿಯಲ್ಲಿ ಬರುವ ವಿನಾಯಕ ಲೇಔಟ್ ಉದ್ಯಾನವನದ ಅಭಿವೃದ್ಧಿಗೆ	20.00
48	ವಾರ್ಡ್–19ರ ಸಂಜಯನಗರ ವ್ಯಾಪ್ತಿಯಲ್ಲಿ ಬರುವ ಎಕ್ಸೈಸ್ ಲೇಔಟ್ ಉದ್ಯಾನವನದ ಅಭಿವೃದ್ಧಿಗೆ	20.00
49	ವಾರ್ಡ್–19ರ ಸಂಜಯನಗರ ವ್ಯಾಪ್ತಿಯಲ್ಲಿ ಬರುವ ಕೆ ಇ.ಬಿ. ಲೇಔಟ್ ಉದ್ಯಾನವನದ ಲ್ಲಿ ಪಾತ್‌ವೇ ನಿರ್ಮಾಣ ಮತ್ತು ಇತರೆ ಅಭಿವೃದ್ಧಿಗೆ	20.00
50	ವಾರ್ಡ್–19ರ ಸಂಜಯನಗರ ವ್ಯಾಪ್ತಿಯಲ್ಲಿ ಬರುವ ಆರ್.ಎಂ.ವಿ. ಆಸ್ಪತ್ರೆ ಎದುರು ಇರುವ ಉದ್ಯಾನವನದ ಅಭಿವೃದ್ಧಿಗೆ	15.00
51	ವಾರ್ಡ್–19ರ ಸಂಜಯನಗರ ವ್ಯಾಪ್ತಿಯಲ್ಲಿ ಬರುವ ರಘುವನ ಉದ್ಯಾನವನದ ಅಭಿವೃದ್ಧಿಗೆ	15.00
52	ವಾರ್ಡ್–108ರ ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಮತ್ತು ಅವಶ್ಯಕತೆ ಇರುವ ಕಡೆಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸುವ ಕಾಮಗಾರಿ	10.00
53	ವಾರ್ಡ್–95ರ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	15.00
54	ವಾರ್ಡ್–61ರ ವ್ಯಾಪ್ತಿಯಲ್ಲಿ ಅವಶ್ಯಕತೆ ಇರುವ ಕಡೆಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ ವಿದ್ಯುತ್ ದೀಪಗಳನ್ನು ಅಳವಡಿಸುವ ಕಾಮಗಾರಿ	10.00
55	ವಾರ್ಡ್–68ರ ವ್ಯಾಪ್ತಿಯಲ್ಲಿ ವಿದ್ಯುತ್ ದೀಪ ಅಳವಡಿಸಲು ಹಾಗೂ ಅವಶ್ಯಕತೆ ಇರುವ ಕಡೆಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸುವ ಕಾಮಗಾರಿ	10.00
56	ವಾರ್ಡ್–27 ವ್ಯಾಪ್ತಿಯಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	15.00
57	ವಾರ್ಡ್–171ರ ವ್ಯಾಪ್ತಿಯಲ್ಲಿ ಹೊಸ ಬೀದಿ ದೀಪದ ಕಂಬ ಹಾಗೂ ಬೀದಿ ದೀಪ ಸ್ಥಾಪಿಸುವ ಕಾಮಗಾರಿ	10.00
58	ವಾರ್ಡ್–170ರ ವ್ಯಾಪ್ತಿಯಲ್ಲಿ ಹೊಸ ಬೀದಿ ದೀಪದ ಕಂಬ ಹಾಗೂ ಬೀದಿ ದೀಪ ಸ್ಥಾಪಿಸುವ ಕಾಮಗಾರಿ	25.00
59	ವಾರ್ಡ್–114ರ ಗೌತಮಪುರದಲ್ಲಿರುವ ಪುಟ್‌ಬಾಲ್ ಮೈದಾನದ ಅಭಿವೃದ್ಧಿ ಕಾಮಗಾರಿಗೆ	25.00
60	ವಾರ್ಡ್–184ರಲ್ಲಿ ಬೀದಿ ದೀಪ ಮತ್ತು ಕಂಟ್ರೋಲ್ ಸ್ವಿಚ್‌ಸ್ ಅಳವಡಿಸುವ ಕಾಮಗಾರಿ	25.00
61	ವಾರ್ಡ್ ಸಂಖ್ಯೆ:159ರಲ್ಲಿ ಬರುವ ಕೊಮ್ಮಘಟ್ಟ ಮುಖ್ಯರಸ್ತೆ, ಕೆಂಗೇರಿ ಸೆಟಲೈಟ್ ಟೌನ್ ಪ್ರದೇಶದ ರಸ್ತೆ ಮತ್ತು ಚರಂಡಿ ಅಭಿವೃದ್ಧಿಗೆ	49.95
62	ವಾರ್ಡ್ ಸಂಖ್ಯೆ:159ರಲ್ಲಿ ಎಂ.ಟಿ.ಎಸ್. ಲೇಔಟ್ 17 ಮತ್ತು 18ನೇ ಅಡ್ಡರಸ್ತೆಗಳ ಅಭಿವೃದ್ಧಿ	49.95

63	ವಾರ್ಡ್ ಸಂಖ್ಯೆ:159ರಲ್ಲಿ ಎಂ.ಟಿ.ಎಸ್. ಲೇಔಟ್ 13 ಮತ್ತು 14ನೇ ಅಡ್ಡರಸ್ತೆಗಳ ಅಭಿವೃದ್ಧಿ	49.95
64	ವಾರ್ಡ್ ಸಂಖ್ಯೆ:08ರಲ್ಲಿ ಭದ್ರಪ್ಪ ಬಡಾವಣೆ, ಮಾರುತಿನಗರ, ದೇವಿನಗರ, ಮುನೇಶ್ವರ ಬ್ಲಾಕ್ ಮತ್ತು ಕೊಡಿಗೆಹಳ್ಳಿ ಗ್ರಾಮದ ಸುತ್ತಮುತ್ತಲಿನ ರಸ್ತೆ ಮತ್ತು ಚರಂಡಿ ಅಭಿವೃದ್ಧಿ	50.00
65	ವಾರ್ಡ್ ಸಂಖ್ಯೆ:103ರ ಕಾವೇರಿಪುರದ ಬಿ.ಡಿ.ಎ. ಬಡಾವಣೆಯಲ್ಲಿ ಬಾಕಿ ಇರುವ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗೆ	50.00
66	ವಾರ್ಡ್ ಸಂಖ್ಯೆ:103ರ ವ್ಯಾಪ್ತಿಯಲ್ಲಿ ಬರುವ ಪಂಚಶೀಲನಗರದಲ್ಲಿ ಕಾಂಕ್ರೀಟ್ ರಸ್ತೆ	50.00
67	ವಾರ್ಡ್ ಸಂಖ್ಯೆ:167ರ ಯಡಿಯೂರು ಪ್ರದೇಶದಲ್ಲಿ ತ್ಯಾಗರಾಜನಗರದಿಂದ ಎಂ.ವಿಶ್ವೇಶ್ವರಯ್ಯ ರಸ್ತೆಯ 14ನೇ ಕ್ರಾಸ್‌ನಿಂದ 2ನೇ ಮುಖ್ಯರಸ್ತೆಯವರೆಗೆ ಚರಂಡಿ ಮತ್ತು ಪಾದಚಾರಿ ರಸ್ತೆ ಅಭಿವೃದ್ಧಿ	20.00
68	ವಾರ್ಡ್ ಸಂಖ್ಯೆ:170ರಲ್ಲಿ ಬರುವ ಪುಟ್ಟೇನಪಾಳ್ಯ ಮತ್ತು 9ನೇ ಬ್ಲಾಕ್ ಜಯನಗರ ಪ್ರದೇಶದಲ್ಲಿ ಚರಂಡಿ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ	50.00
69	ವಾರ್ಡ್ ಸಂಖ್ಯೆ:170ರಲ್ಲಿ ಬರುವ ಈಸ್ಟ್ ಎಂಡ್ ಎ.ಬಿ.ಸಿ.ಡಿ. ಮುಖ್ಯ ರಸ್ತೆ, 9ನೇ ಬ್ಲಾಕ್ ಜಯನಗರ ಪ್ರದೇಶದಲ್ಲಿ ಚರಂಡಿ ಅಭಿವೃದ್ಧಿ ಮತ್ತು ಡಾಂಬರೀಕರಣ ಕಾಮಗಾರಿ	50.00
70	ವಾರ್ಡ್ ಸಂಖ್ಯೆ:168ರ ಪಟ್ಟಾಭಿರಾಮನಗರದ 23ನೇ ಮುಖ್ಯರಸ್ತೆ, 26ನೇ ಎ ಅಡ್ಡರಸ್ತೆ (36ನೇ ಅಡ್ಡರಸ್ತೆಯಿಂದ 39ನೇ ಅಡ್ಡರಸ್ತೆಯವರೆಗೆ) ಡಾಂಬರೀಕರಣ ಕಾಮಗಾರಿ	20.00
71	ವಾರ್ಡ್ ಸಂಖ್ಯೆ:156ವ್ಯಾಪ್ತಿಯಲ್ಲಿ ವಿದ್ಯುತ್ ಕಾಮಗಾರಿ ಕೈಗೊಳ್ಳಲು	70.00
72	ವಾರ್ಡ್–67ರ ವ್ಯಾಪ್ತಿಯಲ್ಲಿ ಬರುವ ವೆಸ್ಟ್ ಆಫ್ ಕಾರ್ಡ್ ರಸ್ತೆ 2ನೇ ಸ್ಟೇಜ್ 11ನೇ ಎ ಕ್ರಾಸ್‌ನಲ್ಲಿ ಚರಂಡಿ ಅಭಿವೃದ್ಧಿಪಡಿಸಿ ಕಲ್ಲುಚಪ್ಪಡಿ ಹಾಕುವ ಕಾಮಗಾರಿ	10.00
73	ವಾರ್ಡ್–67ರ ವ್ಯಾಪ್ತಿಯಲ್ಲಿ ಬರುವ ಬೋವಿಪಾಳ್ಯದ ಅಡ್ಡರಸ್ತೆಗಳಿಗೆ ಸಿಮೆಂಟ್ ಕಾಂಕ್ರೀಟ್ ಹಾಕುವ ಕಾಮಗಾರಿ	10.00
74	ವಾರ್ಡ್–134ರಲ್ಲಿ ಬೀದಿ ದೀಪಗಳನ್ನು ಅಳವಡಿಸುವ ಕಾಮಗಾರಿ	15.00
75	ವಾರ್ಡ್–181ರಲ್ಲಿ ಬರುವ ಕೆ.ಎಸ್.ಲೇಔಟ್ 2ನೇ ಸ್ಟೇಜ್‌ನಲ್ಲಿ ಕನ್ಸರ್‌ವೆನ್ಸಿ ಅಭಿವೃದ್ಧಿ	15.00
76	ವಾರ್ಡ್–101ರಲ್ಲಿ ಆಲದ ಮರದ ಉದ್ಯಾನವನದಲ್ಲಿ ವಾಚ್‌ಮನ್ ಶೆಡ್ ನಿರ್ಮಾಣ	10.00
77	ವಾರ್ಡ್–110ರಲ್ಲಿ ಬರುವ ಪಾಲಿಕೆ ವಸತಿಗೃಹಗಳಿಗೆ ನೀರಿನ ವ್ಯವಸ್ಥೆಕಲ್ಪಿಸಲು ಬೋರ್‌ವೆಲ್ ಹಾಕಲು.	5.00
ಒಟ್ಟು		1799.75

ಅಧ್ಯಕ್ಷರು

ವಾರ್ಡ್‌ಗಳಿಗೆ ಸಂಬಂಧಪಟ್ಟ ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಕ್ರಮ ಸಂಖ್ಯೆ	ಶ್ರೀಯುತರ ಹೆಸರು	ಪದನಾಮ	ನಿರ್ಣಯದ ಪರವಾಗಿ ಸಹಿ
1	ಎ.ಹೆಚ್.ಬಸವರಾಜು	ಅಧ್ಯಕ್ಷರು	

2	ತಿಮ್ಮರಾಜು	ಸದಸ್ಯರು	
3	ಅಶ್ವಥ ನಾರಾಯಣ ಜಿ.ಎ	ಸದಸ್ಯರು	
4	ರಂಗಣ್ಣ ಕೆ	ಸದಸ್ಯರು	K. Rangonne
5	ಸರಸ್ವತಮ್ಮ	ಸದಸ್ಯರು	Saraswathamma
6	ಕೆ. ನಂದಿನಿ ಶ್ರೀನಿವಾಸ್	ಸದಸ್ಯರು	K. Nandini
7	ಸುಗುಣ ಬಾಲಕೃಷ್ಣ	ಸದಸ್ಯರು	
8	ಎಸ್.ಕೆ.ಪುಷ್ಪ	ಸದಸ್ಯರು	S.K. pushpa
9	ಶಾಹಿನ್ ತಾಜ್	ಸದಸ್ಯರು	
10	ಜ್ಯೋತಿಶ್ರೀ ಹರಿರೆಡ್ಡಿ	ಸದಸ್ಯರು	Jyothi Sri Hariredy
11	ಆಶಾ ಸುರೇಶ್	ಸದಸ್ಯರು	S. Asha